# ವಾಯುಪಡೆಯಲ್ಲಿ ಸಾಹಸಿ ತರುಣಿಯರ ಅಚ್ಚಳಿಯದ ಹಾರಾಟ




ವಾಯುಪಡೆಯ ಮಹಿಳಾ ಅಧಿಕಾರಿಗಳು

'ಗುಂಜನ್ ಸಕ್ಸೇನಾ – ದಿ ಕಾರ್ಗಿಲ್ ಗರ್ಲ್' ಸಿನಿಮಾ ವಾಯುಪಡೆಯಲ್ಲಿ ಹೆಣ್ಣುಮಕ್ಕಳು ಎದುರಿಸುವ ಪಡಿಪಾಟಲುಗಳ ಬಗ್ಗೆ ಸಮಾಜದ ಗಮನಸೆಳೆದಿದೆ. ಅತಿರೇಕದ ಹೊರತಾಗಿಯೂ ಗುಂಜನ್ ಅವರ ಬದುಕನ್ನು ಸಿನಿಮಾ ಪರಿಣಾಮಕಾರಿಯಾಗಿ ಚಿತ್ರಿಸಿದೆ. ಯುದ್ಧಭೂಮಿಯನ್ನು ಹೊಕ್ಕ ಭಾರತದ ಪ್ರಥಮ ಪೈಲೆಟ್ ಎನ್ನುವುದು ಗುಂಜನ್ ಅವರ ಹಿರಿಮೆ. ಈ 'ಪ್ರಥಮ ಪೈಲೆಟ್' ಎನ್ನುವ ಸಾಧನೆ–ವಿಶೇಷಣದ ಬಗ್ಗೆ ಪ್ರಸ್ತುತ ಚರ್ಚೆ ನಡೆಯುತ್ತಿದೆ. ಆದರೆ, ಸಿನಿಮಾದಾಚೆಗೂ, ಯುದ್ಧಭೂಮಿ ಪ್ರವೇಶಿಸಿದ ಮೊದಲ ಪೈಲೆಟ್ ಎನ್ನುವ ಸಾಧನೆಯಾಚೆಗೂ ಗುಂಜಾನ್ ಹಾಗೂ ಅವರ ಸಹವರ್ತಿ ಹೆಣ್ಣುಮಕ್ಕಳ ಸಾಧನೆಗೆ ಚಾರಿತ್ರಿಕ ಮಹತ್ವವಿದೆ. ಪುರುಷಕೇಂದ್ರಿತ ವಾಯುಪಡೆಗೆ ಸ್ತ್ರೀಸ್ಪರ್ಶ ನೀಡಿದ ಹಿರಿಮೆ ಈ ಸಾಹಸಿ ಹೆಣ್ಣುಮಕ್ಕಳದು. ವಾಯುಪಡೆಯಲ್ಲಿ ಮೊದಲ ಬಾರಿಗೆ ತಮ್ಮ ಅಸ್ತಿತ್ವವನ್ನು ಪ್ರಕಟಪಡಿಸಿದ ಸಾಧಕಿಯರ ಹೋರಾಟದ ಈ ಅವಲೋಕನ, ಎಲ್ಲ ಕ್ಷೇತ್ರಗಳಲ್ಲಿಯೂ ಮಹಿಳೆಯರಿಗೆ ಸಮಾನ ಅವಕಾಶ ಇರಬೇಕೆನ್ನುವ ಅಗತ್ಯವನ್ನು ಒತ್ತಿಹೇಳುತ್ತದೆ.

■ ನೇಮಿಚಂದ್ರ